# ಸತ್ಯ-ಸುಳ್ಳಿನ ನಡುವೆ ನಿರೂಪ್



ನಟ ನಿರೂಪ್ ಭಂಡಾರಿ ಮತ್ತೊಂದು ಹೊಸ ಪ್ರಾಜೆಕ್ಟ್‌ಗೆ ಸಹಿ ಹಾಕಿದ್ದಾರೆ. ಸಚಿನ್ ವಾಲಿ ನಿರ್ದೇಶನದ ಸಿನಿಮಾದಲ್ಲಿ ನಟಿಸಲು ತಯಾರಾಗುತ್ತಿದ್ದಾರೆ.

'ಫ್ಯಾಮಿಲಿ ಎಂಟರ್‌ಟೇನರ್' ಜಾನರ್ ಮೂಲಕ ಚಂದನವನದಲ್ಲಿ ತಮ್ಮ ಚೊಚ್ಚಿಲ ಸಿನಿಮಾ ನಿರ್ದೇಶನಕ್ಕೆ ಕಾಲಿಟ್ಟಿದ್ದಾರೆ ಸಚಿನ್.

ಹಲವು ಕಾರಣಗಳಿಂದಾಗಿ, ಸಂಬಂಧಗಳ ನಡುವಿನ ಮೌಲ್ಯ ಕಳೆದುಕೊಳ್ಳುತ್ತಿರುವ ಈ ದಿನಗಳಲ್ಲಿ ಸಾಮಾಜಿಕ ಸಂದೇಶದೊಂದಿಗೆ ಕೌಟುಂಬಿಕ ಸಂಬಂಧಗಳ ಮೌಲ್ಯವನ್ನು ಸಿನಿಮಾ ಒಳಗೊಂಡಿದೆ. ಇದರಲ್ಲಿ ರೊಮ್ಯಾಂಟಿಕ್ ಹಾಗೂ ಕಾಮಿಡಿ ಅಂಶಗಳೂ ಇದ್ದು, ಇದೇ ತಿಂಗಳಿನಲ್ಲಿ ಸಿನಿಮಾ ಚಿತ್ರೀಕರಣವನ್ನು ಆರಂಭಿಸಲಾಗುವುದು ಎಂದು ಚಿತ್ರತಂಡ ಹೇಳಿಕೊಂಡಿದೆ.

'ಸತ್ಯ ಮತ್ತು ಸುಳ್ಳಿನ ನಡುವೆ ಇರುವ ಸಾಮಾಜಿಕ ಬದ್ಧತೆ ಸುತ್ತ ಸಾಗುವ ಕಾಮಿಡಿ ಫ್ಯಾಮಿಲಿ ಎಂಟರ್‌ಟೇನರ್ ಕಥಾಹಂದರದ ಸಿನಿಮಾ ಇದಾಗಿದೆ' ಎಂದು ಮಾಹಿತಿ ನೀಡಿದ್ದಾರೆ ಸಚಿನ್. ಸಚಿನ್ ಬಸ್ರೂರ್ ಈ ಸಿನಿಮಾಗೆ ಸಂಗೀತ ನಿರ್ದೇಶಕರಾಗಿದ್ದು, ಸಂದೀಪ್ ವಲ್ಲೂರಿ ಸಿನಿಮಾಟೊಗ್ರಫಿ ಇದೆ.

ಈ ನಡುವೆ ನಾಗತಿಹಳ್ಳಿ ಚಂದ್ರಶೇಖರ್ ಅವರ ಸಿನಿಮಾದಲ್ಲೂ ನಿರೂಪ್ ತೊಡಗಿದ್ದಾರೆ. ಈಚೆಗೆ ಈ ಸಿನಿಮಾ ಚಿತ್ರೀಕರಣ ಆರಂಭಗೊಂಡಿದ್ದು, ಶಾನ್ವಿ ಶ್ರೀವತ್ಸ ಜೊತೆ ಮೊದಲ ಬಾರಿ ತೆರೆ ಹಂಚಿಕೊಳ್ಳುತ್ತಿದ್ದಾರೆ. ನಟ ಪೃಥ್ವಿ ಅಂಬರ್ ಕೂಡ ಪ್ರಮುಖ ಪಾತ್ರದಲ್ಲಿದ್ದಾರೆ. ■

# ಇನ್ನು ಮೋನಿಕಾ 'ದುನಿಯಾ'

ಕನ್ನಡ ನಟ ದುನಿಯಾ ವಿಜಿ ಪುತ್ರಿ ಮೋನಿಕಾ ಸಿನಿಮಾರಂಗ ಪ್ರವೇಶಿಸುತ್ತಿದ್ದು, ಅಪ್ಪ–ಮಗಳು ಸಿನಿಮಾದಲ್ಲಿ ಒಟ್ಟಿಗೆ ಕಾಣಿಸಿಕೊಳ್ಳುತ್ತಿದ್ದಾರೆ.

ಈಚೆಗಷ್ಟೇ ದುನಿಯಾ ವಿಜಿ ತಮ್ಮ ಪುತ್ರಿಯರನ್ನು ಸಿನಿಮಾರಂಗಕ್ಕೆ ಪರಿಚಯಿಸುವುದಾಗಿ ಹೇಳಿದ್ದರು. ತಮ್ಮ ಮಕ್ಕಳಾದ ಮೋನಿಕಾ ಹಾಗೂ ಮೋನಿಷಾ ಚಿತ್ರರಂಗಕ್ಕೆ ಬರಲು ಹಲವು ಸಿದ್ಧತೆಗಳನ್ನು ಮಾಡಿಕೊಂಡಿರುವುದಾಗಿ ತಿಳಿಸಿದ್ದರು. ಇದೀಗ ಮೋನಿಕಾ ಅಭಿನಯಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ.

ಈ ಸಿನಿಮಾ ಬಗ್ಗೆ ಸಂತಸದಿಂದ ಮಾತನಾಡಿರುವ ವಿಜಯ್, 'ಒಬ್ಬ ಅಪ್ಪನಾಗಿ ನನ್ನ ಮಕ್ಕಳ ಬಗ್ಗೆ ನನಗೆ ಸಾಕಷ್ಟು ಕನಸುಗಳಿವೆ. ಅದರಲ್ಲಿ ಒಂದು ಕನಸು ನಿಜವಾಗುತ್ತಿದ್ದು, ನನ್ನ ಮಗಳು ಮೋನಿಕಾ ಸಿನಿಮಾರಂಗಕ್ಕೆ ಕಾಲಿಡುತ್ತಿದ್ದಾಳೆ' ಎಂದಿದ್ದಾರೆ.

ಸಿನಿಮಾ ಕುರಿತು ಮಾಹಿತಿ ನೀಡಿರುವ ಅವರು, 'ಇದು ಸಂಪೂರ್ಣ ಫ್ಯಾಮಿಲಿ ಡ್ರಾಮಾ. ನಾನು, ಮೋನಿಕಾ ಇಬ್ಬರೂ ಸಿನಿಮಾದಲ್ಲಿದ್ದೇವೆ. ನಾನು ಸಿನಿಮಾದಲ್ಲಿ ಕೂಡ ಮೋನಿಕಾ ತಂದೆಯಾಗಿದ್ದೇನೆ. ಸಿನಿಮಾ ಸೆಟ್‌ನಲ್ಲಿ ನಾನು ಶಿಸ್ತಿನ ನಟ. ಆ ಮೌಲ್ಯವನ್ನೇ ನನ್ನ ಮಗಳಲ್ಲೂ ನಿರೀಕ್ಷಿಸುತ್ತೇನೆ. ಸೆಟ್‌ನಲ್ಲಿ ನಾನು ಅವಳಿಗೆ ಸಹ ನಟನಾಗಿರುತ್ತೇನೆ ಅಷ್ಟೆ' ಎಂದಿದ್ದಾರೆ.

ಮಕ್ಕಳೊಂದಿಗಿನ ತಮ್ಮ ಬಾಂಧವ್ಯದ ಕುರಿತೂ ಮಾತು ಹಂಚಿಕೊಂಡಿರುವ ಅವರು, 'ನನ್ನ ಹಾಗೂ ನನ್ನ ಮಕ್ಕಳ ನಡುವಿನ ಬಾಂಧವ್ಯ ನನಗೆ ತುಂಬಾ ಪವಿತ್ರವಾದುದು. ಅವರಿಗೆ ನಾನು ಒಳ್ಳೆ ಸ್ನೇಹಿತ, ಜವಾಬ್ದಾರಿಯುತ ತಂದೆಯೂ ಹೌದು. ಅವರು ತಮ್ಮ ಕನಸುಗಳನ್ನು ತಲುಪಲು ನಾನು ಸಹಾಯ ಮಾಡಬಹುದು. ಅವರಿಗೆ ಬೇಕಾದ ಜೀವನವನ್ನು ಅವರು ಜೀವಿಸುತ್ತಿರುವುದಕ್ಕೆ ಸಾಕ್ಷಿಯಾಗಿರುವುದಕ್ಕಿಂತ ದೊಡ್ಡ ಖುಷಿ ಬೇರೊಂದಿಲ್ಲ' ಎಂದು ಭಾವುಕವಾಗಿ ಮಾತನಾಡಿದ್ದಾರೆ.

'ಗುರುಶಿಷ್ಯರು' ಸಿನಿಮಾ ಖ್ಯಾತಿಯ ಜಡೇಶ್ ಕೆ. ಹಂಪಿ ಜೊತೆ ಈ ಪ್ರಾಜೆಕ್ಟ್‌ನಲ್ಲಿ ವಿಜಯ್ ತೊಡಗಿಸಿಕೊಂಡಿದ್ದಾರೆ. ■

